**0107** **(A)**

Total No. of Questions—15

Total No. of Printed Pages—4 Regd. No. | | | | | | | | | | |

Part II

# KANNADA, Paper - I

(Second Language)

*Time : 3 Hours]* *[Max. Marks : 100*

**I.** ಈ ಕೆಳಗಿನ ಪದ್ಯಗಳಲ್ಲಿ ಯಾವುದಾದರೂ ಒಂದಕ್ಕೆ ಭಾವಾರ್ಥ ಬರೆಯಿರಿ : 1×6=6

ಲೋಕದ ಚೇಷ್ಟೆಗೆ ಕವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ
ಎನಗುಳ್ಳದೊಂದು ಮನ
ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನಾ?

ಅಥವಾ

ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರು?
ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗೇಡಾಗಿ
ಬಡದೆ ರಕ್ಷಿಪನು ಇದಕೆ ಸಂಶಯವಿಲ್ಲ.

**II.** ಈ ಕೆಳಗಿನವುಗಳೆರಡರಲ್ಲಿ ಒಂದನ್ನು ಕುರಿತು **20** ವಾಕ್ಯಮೀರದಂತೆ ಉತ್ತರಿಸಿ : 1×6=6

(1) ಸೀತೆಯು ದುಃಖಿಸಿದ ಪರಿಯನ್ನು ವಾಲ್ಮೀಕಿ ಸಂತೈಸಿದ ಬಗೆಯನ್ನು ವಿವರಿಸಿ.

(2) ನಾಡು ನುಡಿ ಸಂಸ್ಕೃತಿಯ ರಕ್ಷಣೆ ನಮ್ಮ ಗುರಿ ಎಂದು ಕುವೆಂಪು ಅವರ 'ಅಖಂಡ ಕರ್ನಾಟಕ' ಕವನವನ್ನಾದರಿಸಿ ವಿವರಿಸಿ.

**III.** ಈ ಕೆಳಗಿನ ಎರಡರಲ್ಲಿ ಒಂದನ್ನು ಕುರಿತು **20** ವಾಕ್ಯಗಳಿಗೆ ಮೀರದಂತೆ ಉತ್ತರಿಸಿ : 1×6=6

(1) ಜ್ಯೋತಿಷ್ಯವು ವಿಜ್ಞಾನವೇ? ಸ್ವಾಮಿ ವಿವೇಕಾನಂದರು ಬುದ್ಧನು ಈ ಶಾಸ್ತ್ರದ ಬಗ್ಗೆ ಹೊಂದಿರುವ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆಯಿರಿ.

(2) ರಾಗಿಯ ಬಗ್ಗೆ ಇರುವ ಮೆಚ್ಚುಕೆಯ ಮಾತುಗಳಾವವು? ಲೇಖಕರರಾಗಿ ಸಂಶೋಧನೆ ಮತ್ತು ರಾಗಿ ಪ್ರೀತಿಯನ್ನು ವಿವರಿಸಿರಿ.

**IV.** ಈ ಕೆಳಗಿನ ಎರಡರಲ್ಲಿ ಒಂದನ್ನು ಕುರಿತು **20** ವಾಕ್ಯಗಳಿಗೆ ಮೀರದಂತೆ ಉತ್ತರಿಸಿರಿ : 1×6=6

(1) ಸೋತವರ ಕಡೆ ಶಿವನಿದ್ದಾನೆ ಎಂಬುದನ್ನು ಬೋಳೇಶಂಕರನ ಜೀವನ ಚಿತ್ರಣದೊಂದಿಗೆ ಸ್ಪಷ್ಟಪಡಿಸಿರಿ.

(2) ತಲೆಯಿಂದ ಕೆಲಸ ಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ವಿವರಿಸಿರಿ.

**V.** ಈ ಕೆಳಗಿನ ನಾಲ್ಕರಲ್ಲಿ ಯಾವುದಾದರೂ ಎರಡಕ್ಕೆ ಸಂದರ್ಭ ಸೂಚಿಸಿ ವಿವರಿಸಿ ಬರೆಯಿರಿ : 2×3=6

(1) ಮೆಳೆಭಕ್ತನೆ? ಇಟ್ಟಾತ ಗುರುವೆ?

(2) ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ.

(3) ಇಲ್ಲೇ ಒಸಿ ದಿನ ಇಟ್ಕೊಂಡು ಉಳಿಸಿಕೊಡಿ.

(4) ಸಂದು ಹೋದ ಜೀವನ ಶೈಲಿಯೆಂದರ ಮೆಲುಕು.

**VI.** ಈ ಕೆಳಗಿನ ನಾಲ್ವರು ಕವಿ/ಲೇಖಕರಲ್ಲಿ ಇಬ್ಬರ ಪರಿಚಯ ಬರೆಯಿರಿ : 2×3=6

(1) ಹರಿಹರ.

(2) ಮಾಲತಿ ಪಟ್ಟಣ ಶೆಟ್ಟಿ.

(3) ಎಚ್.ಎಸ್. ಶಿವಪ್ರಕಾಶ್.

(4) ಡಾ. ಬೆಸಗರ ಹಳ್ಳಿ ರಾಮಣ್ಣ.

**VII.** ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ. : 2×3=6

(1) ಕರ್ಣನ ಜನ್ಮರಹಸ್ಯವನ್ನು ಯಾರು ಯಾರು ಅರಿತಿದ್ದರು?

(2) ಕಾಲು ಮತ್ತು ದೇಹವನ್ನು ಯಾವುದಕ್ಕೆ ಹೋಲಿಸಲಾಗಿದೆ?

(3) ರತ್ನ ಮತ್ತು ಮುತ್ತು ಏನನ್ನು ಸೂಚಿಸುತ್ತವೆ?

(4) ಲಕ್ಷ್ಮಣ ದುಃಖಿತನಾಗಲು ಕಾರಣವೇನು?

**VIII.** ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ಸಂಕಿಷಪ್ತವಾಗಿ ಉತ್ತರಿಸಿರಿ : 2×3=6

(1) ಊರಿಗೆ ಬಂದ ಕರಿಸಿದ್ದೆಗೌಡ ಏನನ್ನು ಗಿರವಿ ಇಡಲು ಪ್ರಯತ್ನಿಸಿದ?

(2) ರಾಗಿಯಲ್ಲಿ ಯಾವ ರೋಗಗಳನ್ನು ತಡೆಯಬಲ್ಲ ಗುಣವಿದೆ?

(3) ಜ್ಯೋತಿಷ್ಯದ ಪ್ರಕಾರ ಗ್ರಹಗಳೆಷ್ಟು? ಅವುಗಳು ಯಾವವು?

(4) ಮಹಾನ್ ವ್ಯಕ್ತಿಗಳ ದರ್ಶನ ಅರ್ಥವಾಗುವುದು ಹೇಗೆ?

**IX.** ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ : 2×3=6

(1) ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದ?

(2) ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?

(3) ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ?

(4) ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಸಿದ್ದೇಕೆ?

**X.** ಈ ಕೆಳಗಿನ ಎರಡರಲ್ಲಿ ಒಂದನ್ನು ಕುರಿತು ಪತ್ರ ಬರೆಯಿರಿ : 1×6=6

(1) ಪ್ರವಾಸದ ಬಗ್ಗೆ ನಿಮ್ಮ ತಂದೆಯವರಿಗೆ ಹಣವನ್ನು ಕೋರಿ ಪತ್ರ ಬರೆಯಿರಿ.

(2) ಕಾಲೇಜಿನ ಅಶಿಸ್ತನ್ನು ಕುರಿತು ನಿಮ್ಮ ಪ್ರಿನ್ಸಿಪಾಲರಿಗೆ ಪತ್ರ ಬರೆಯಿರಿ.

**XI.** **(A)** ಈ ಕೆಳಗಿನ ಎಂಟು ಸಂಧಿ ಪದಗಳಲ್ಲಿ ನಾಲ್ಕಕ್ಕೆ ಸಂಧಿ ಬಿಡಿಸಿ, ಸಂಧಿಯನ್ನು ಹೆಸರಿಸಿರಿ. 4×2=8

(1) ಮಾತಿಲ್ಲ.

(2) ಮನೆಯನ್ನು

(3) ಮಳೆಗಾಲ

(4) ನೀರಿಲ್ಲ

(5) ಗುರುವನ್ನು

(6) ಆವೂರು

(7) ಹಳೆಗನ್ನಡ

(8) ಸುಖಪಡು

**(B)** ಈ ಕೆಳಗಿನ ಆರು ಸಮಾಸ ಪದಗಳಲ್ಲಿ ಮೂರಕ್ಕೆ ಸಮಾಸ ಬಿಡಿಸಿ ಸಮಾಸವನ್ನು ಹೆಸರಿಸಿ: 3×2=6

(1) ಬಾಯಿಜಗಳ

(2) ಹೆಮ್ಮರ

(3) ಸಿಂಹಗರ್ಜನೆ

(4) ಮುಖಕಮಲ

(5) ಶ್ವೇತಛತ್ರ

(6) ನಾಲ್ಮೊಗ

**(C)** ಈ ಕೆಳಗಿನ ಎಂಟು ಪದಗಳಲ್ಲಿ ಐದಕ್ಕೆ ಅರ್ಥ ಬರೆಯಿರಿ. 5×1=5

(1) ಪೆಸರ್

(2) ಪಾಲು

(3) ಅಣ್ಣು

(4) ಜೀಯ

(5) ಮಾನಿಸರು

(6) ಕುಡಿತೆ

(7) ಬಾತೆ

(8) ತೊಡರು

**XII.** ಈ ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪ್ರಬಂಧ ಬರೆಯಿರಿ. 1×6=6

(1) ದೂರದರ್ಶನದ ಪರಿಣಾಮಗಳು.

(2) ಪ್ರಜಾಪ್ರಭುತ್ವದಲ್ಲಿ ವಿದ್ಯಾರ್ಥಿಗಳ ಪಾತ್ರ.

(3) ವನಸಿರಿಯೇ ನಮ್ಮ ನಿಜವಾದ ಸಂಪತ್ತು.

**XIII.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. 5×1=5

(1) ಚೋಳದೇಶವು ಯಾರಿಗೆ ನೆಲೆಯಾಗಿತ್ತು?

(2) ಅಲ್ಲಮ ಪ್ರಭುವಿನ ವಚನಾಂಕಿತ ಯಾವುದು?

(3) ಹರಿಯು ಕರ್ಣನಿಂದ ಬೇಡಿದ್ದೇನು?

(4) ಕಪ್ಪೆಗಳು ಎಲ್ಲಿ ಹುಟ್ಟಿ ಕೂಗುತ್ತವೆ?

(5) ಮಾದೇವ ಎಲ್ಲಿ ಒರಗಿದ್ದಾನೆ?

**XIV.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 5×1=5

(1) ವೈದ್ಯಾಧಿಕಾರಿಯ ಜ್ಞಾಪಕಕ್ಕೆ ಬಂದದ್ದು ಏನು?

(2) ನೀರಿಗಾಗಿ ಕರಿಯ ಏನನ್ನು ತರುತ್ತಿದ್ದ?

(3) ಜಾತಕಗಳನ್ನು ಹೇಗೆ ಬರೆಯಲಾಗುತ್ತದೆ?

(4) ಮಾಯಾದೇವಿಯ ದೇವಾಲಯ ಹೇಗಿತ್ತು?

(5) ಮಾಸ್ತರರ ಅವಳಿ ಮಕ್ಕಳ ಸಾವು ಹೇಗಾಯಿತು?

**XV.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 5×1=5

(1) ಬೋಳೆಶಂಕರನ ಊರು ಯಾವುದು?

(2) ಪಿಶಾಚಿಗಳು ಯಾರ ಹೆಸರು ಕೇಳಿದರೆ ಹೆದರುತ್ತವೆ?

(3) ರಾಜಕುಮಾರಿಗೆ ಬಂದ ರೋಗ ಯಾವುದು?

(4) ಕತ್ತಲೆಯ ನಿಜ ಜನಕನು ಯಾರು?

(5) ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು?